# ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.

**ಉಪಸ್ಥಿತರುಃ ಶ್ರೀ. ಸತೀಶ ಕೆ.ಜಿ**

ಬಿ.ಎ., ಎಲ್.ಎಲ್ ಬಿ.,

ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,

ನಂಜನಗೂಡು.

ದಿನಾಂಕಃ 04 ನೇ ಏಪ್ರಿಲ್, 2026

**ಮೂಲ ದಾವೆ ಸಂಖ್ಯೆ 95/2026**

**ವಾದಿಗಳುಃ**

1) ಶ್ರೀ.ಹೆಚ್.ಡಿ.ಮಹದೇವಸ್ವಾಮಿ ಬಿನ್ ಲೇಟ್ ದೇವಣ್ಣ
ವಯಸ್ಸು ಸುಮಾರು 52 ವರ್ಷ,

2) ಶ್ರೀ.ಉಮೇಶ ಬಿನ್ ಲೇಟ್ ದೇವಣ್ಣ
ವಯಸ್ಸು ಸುಮಾರು 50 ವರ್ಷ,
ಇಬ್ಬರ ವಾಸಃ ಹುಸ್ಕೂರು ಗ್ರಾಮ,
ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ.ಕೆ.ಎಸ್. ನಾಗರಾಜು, ವಕೀಲರು)**

**// ವಿರುದ್ಧ //**

**ಪ್ರತಿವಾದಿಃ**

ಶ್ರೀ.ಹೆಚ್.ಎಸ್.ಮಹದೇವಸ್ವಾಮಿ
ವಯಸ್ಸು ಸುಮಾರು 42 ವರ್ಷ,
ಬಿನ್ ಲೇಟ್ ಸಣ್ಣಪ್ಪ,
ವಾಸಃ ಹುಸ್ಕೂರು ಗ್ರಾಮ,
ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ. ಎ.ಸಿ. ಪ್ರಕಾಶ್, ವಕೀಲರು)**

## ಮಧ್ಯಕಾಲಿನ ಅರ್ಜಿ ಸಂಖ್ಯೆ–1 ರ ಪಕ್ಷಗಾರರು

**ಅರ್ಜಿದಾರರು/1 ನೇ ವಾದಿಃ** ಶ್ರೀ.ಹೆಚ್.ಡಿ.ಮಹದೇವಸ್ವಾಮಿ

**// ವಿರುದ್ಧ //**

**ಎದುರುದಾರರು/ಪ್ರತಿವಾದಿಃ** ಶ್ರೀ.ಹೆಚ್.ಎಸ್.ಮಹದೇವಸ್ವಾಮಿ

| | |
|---|---|
| ಯಾವ ಕಾಯಿದೆಯಡಿಯಲ್ಲಿ ಮಧ್ಯಕಾಲೀನ ಅರ್ಜಿಯನ್ನು ಸಲ್ಲಿಸಲಾಗಿದೆ. | ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 |
| ಯಾವ ಪರಿಹಾರ ಕೋರಿ ಸಲ್ಲಿಸಲಾಗಿದೆ | ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ |
| ಮಧ್ಯಕಾಲೀನ ಅರ್ಜಿ ಸಂಖ್ಯೆ-1 ನ್ನು ಸಲ್ಲಿಸಿದ ದಿನಾಂಕ | 19.02.2026 |
| ಮಧ್ಯಕಾಲೀನ ಅರ್ಜಿ ಸಂಖ್ಯೆ | IA.No.1 |
| ಎದುರುದಾರರು ಮಧ್ಯಕಾಲೀನ ಅರ್ಜಿಗೆ ತಕರಾರು ಸಲ್ಲಿಸಿದ ದಿನಾಂಕ | 12.03.2026 |
| ಮಧ್ಯಕಾಲೀನ ಅರ್ಜಿ ಸಂಖ್ಯೆ-1 ರ ಮೇಲೆ ಆದೇಶ ಮಾಡಿದ ದಿನಾಂಕ | 04.04.2026 |

## ಮಧ್ಯಕಾಲೀನ ಅರ್ಜಿ ಸಂಖ್ಯೆ-1 ರ ಮೇಲೆ ಆದೇಶ

ವಾದಿಗಳು ಈ ದಾವೆಯನ್ನು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದು, ವಾದಪತ್ರದ ಜೊತೆಗೆ ಮಧ್ಯಕಾಲೀನ ಅರ್ಜಿ ಸಂಖ್ಯೆ: 1 ನ್ನು ಸಲ್ಲಿಸಿ, ಪ್ರತಿವಾದಿಗಳಾಗಲೀ, ಅವರ ಪ್ರತಿನಿಧಿಗಳಾಗಲೀ, ಅವರ ಸಹಾಯಕರಾಗಲಿ ಯಾರೂ ಸಹ ವಾದಿಗಳು ನಿರ್ಮಾಣ ಮಾಡುತ್ತಿರುವ ಜಾನುವಾರು ಕೊಟ್ಟಿಗೆಗೆ ಯಾವುದೇ ರೀತಿ ಹಸ್ತಕ್ಷೇಪ ಮಾಡದಂತೆ ಮತ್ತು ದಾವಾ ಸ್ವತ್ತಿನ ಶಾಂತಿಯುತ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ಕೊಡದಂತೆ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸಬೇಕೆಂದು ಕೇಳಿಕೊಂಡಿರುತ್ತಾರೆ.

2. ಮಧ್ಯಕಾಲೀನ ಅರ್ಜಿ ಸಂಖ್ಯೆ-1 ರ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ 1 ನೇ ವಾದಿ ಹೇಳುವುದೇನೆಂದರೆ, ತಾನು ಮತ್ತು 2 ನೇ ವಾದಿ ಶ್ರೀ.ದೇವಣ್ಣರವರ ಮಕ್ಕಳಾಗಿದ್ದು, ಸದರಿ ಶ್ರೀ.ದೇವಣ್ಣ ಸುಮಾರು 12 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ.

ಅವರ ಕಾಲಾನಂತರ ತಾನು ಮತ್ತು 2 ನೇ ವಾದಿ ದಾವಾ "ಎ" ತಪಶೀಲು ಸ್ವತ್ತಿನಲ್ಲಿ ಮಾಲೀಕತ್ವ ಹೊಂದಿ ಸ್ವಾಧೀನಾನುಭವದಲ್ಲಿರುತ್ತೇವೆ. ದಾವಾ ತಪಶೀಲು ಸ್ವತ್ತುಗಳು ಮೂಲತಃ ಶ್ರೀ.ದೇವಣ್ಣರವರಿಗೆ ಸೇರಿದ ಸ್ವತ್ತುಗಳಾಗಿದ್ದು, ಸದರಿ ಶ್ರೀ.ದೇವಣ್ಣರವರು ದಾವಾ "ಎ" ತಪಶೀಲು ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಿದ್ದು, ದಕ್ಷಿಣದ ಕಡೆ ಖಾಲಿ ಜಾಗ ಬಿಟ್ಟುಕೊಂಡಿದ್ದರು. ಸದರಿ ಖಾಲಿ ಜಾಗವೇ ದಾವಾ "ಬಿ" ತಪಶೀಲು ಸ್ವತ್ತಾಗಿರುತ್ತದೆ. ದಾವಾ ತಪಶೀಲು ಸ್ವತ್ತುಗಳಿಗೆ ಸಂಬಂಧಿಸಿದಂತೆ ತನ್ನನ್ನು ಮತ್ತು 2 ನೇ ವಾದಿಯನ್ನು ಹೊರತುಪಡಿಸಿ ಪ್ರತಿವಾದಿಗೆ ಯಾವುದೇ ರೀತಿ ಹಿತಾಸಕ್ತಿ ಅಥವಾ ಸ್ವಾಧೀನವಾಗಲೀ ಇರುವುದಿಲ್ಲ. ದಿನಾಂಕ 09/01/2026 ರಂದು ದನದ ಕೊಟ್ಟಿಗೆ ನಿರ್ಮಾಣ ಮಾಡಲು ಮುಂದಾದಾಗ ಪ್ರತಿವಾದಿ ಏಕಾಏಕಿ ಬಂದು ಕೊಟ್ಟಿಗೆ ನಿರ್ಮಾಣ ಮಾಡದಂತೆ ಅಡ್ಡಿ ಪಡಿಸಿರುತ್ತಾರೆ. ಈ ಬಗ್ಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ದಿನಾಂಕ 10/01/2026 ಸ್ವೀಕೃತಿ ನೀಡಿ ವಿವಾದವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಸೂಚಿಸಿದ ಮೇರೆಗೆ ಈ ದಾವೆ ಸಲ್ಲಿಸಿರುವುದಾಗಿ ಹೇಳಿರುತ್ತಾರೆ. 1 ನೇ ವಾದಿ ಮುಂದುವರಿದು ಹೇಳುವುದೇನೆಂದರೆ, ಒಂದು ವೇಳೆ ಮಧ್ಯಕಾಲೀನ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ಯಾವುದೇ ರೀತಿ ತೊಂದರೆಯಾಗುವುದಿಲ್ಲ ಮತ್ತು ಸದರಿ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ ಮಧ್ಯಕಾಲೀನ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸುವಂತೆ ಕೇಳಿಕೊಂಡಿರುತ್ತಾರೆ.

3. ಪ್ರತಿವಾದಿ ತನ್ನ ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆಯ ಜೊತೆಗೆ ಮಧ್ಯಕಾಲೀನ ಅರ್ಜಿ ಸಂಖ್ಯೆ-1 ಕ್ಕೆ ತಕರಾರು ಸಲ್ಲಿಸಿ ವಾದಿ ಸಲ್ಲಿಸಿರುತ್ತಾರೆ. ತನ್ನ ತಕರಾರಿನಲ್ಲಿ ಪ್ರತಿವಾದಿಯ ತಂದೆ ಸಣ್ಣಪ್ಪ ಮತ್ತು ವಾದಿಗಳ ತಂದೆ ದೇವಣ್ಣರವರು

ಸಹೋದರರಾಗಿದ್ದು, ಇವರಿಬ್ಬರು ಮೃತಪಟ್ಟಿರುತ್ತಾರೆ. ಪ್ರತಿವಾದಿಯ ತಾತ ಮೃತಪಟ್ಟ ನಂತರ ಕುಟುಂಬಕ್ಕೆ ಸೇರಿದ ಎಲ್ಲಾ ಸ್ವತ್ತುಗಳನ್ನು ಅವರ ಮಕ್ಕಳಾದ ದೇವಣ್ಣ ಮತ್ತು ಸಣ್ಣಪ್ಪರವರು ದಾವೆಯಲ್ಲಿ ವಿವರಿಸಿರುವ 'ಎ' ಮತ್ತು 'ಬಿ' ತಪಶೀಲು ಸ್ವತ್ತುಗಳನ್ನು ಮತ್ತು ಹಳೆಯ ಮನೆಯಾದ ಹುಸ್ಕೂರು ಗ್ರಾಮದ ಜಂಜರ್ ಸಂಖ್ಯೆ-18 ಪೂರ್ವ-ಪಶ್ಚಿಮ 16 ಅಡಿ, ಉತ್ತರ-ದಕ್ಷಿಣ 42 ಅಡಿ ಮನೆಯನ್ನು ದಿನಾಂಕ 10.12.1966 ರಲ್ಲಿ ನೋಂದಾಯಿತವಲ್ಲದ ವಿಭಾಗಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದು, ಅದರಂತೆ 'ಎ' ಮತ್ತು 'ಬಿ' ತಪಶೀಲು ಸ್ವತ್ತುಗಳು ಹಿತ್ತಲು ಖಾಲಿ ಜಾಗವಾಗಿದ್ದು, ಸದರಿ ಸ್ವತ್ತುಗಳು ಪಂಚಾಯ್ತಿ ದಾಖಲೆಗಳಲ್ಲಿ ಸೇರಿಲ್ಲದ ಸಂದರ್ಭದಲ್ಲಿ ಅವುಗಳನ್ನು ಉತ್ತರ ದಕ್ಷಿಣವಾಗಿ ವಿಭಾಗ ಮಾಡಿಕೊಂಡಿದ್ದು, ಅದರ ಪೈಕಿ ಪೂರ್ವಾರ್ಧ ಭಾಗವನ್ನು ವಾದಿಗಳ ತಂದೆ ದೇವಣ್ಣರವರಿಗು ಮತ್ತು ಪಶ್ಚಿಮಾರ್ಧ ಭಾಗವನ್ನು ಪ್ರತಿವಾದಿ ತಂದೆ ಸಣ್ಣಪ್ಪರವರು ಸಮವಾಗಿ ವಿಭಾಗಿಸಿಕೊಂಡಿದ್ದರು ಹಾಗು ಅಲ್ಲಿಯುವರೆಗೂ ಸದರಿ ದೇವಣ್ಣರವರಿಗೆ ಸಣ್ಣಪ್ಪರವರು 'ಎ' ಮತ್ತು 'ಬಿ' ತಪಶೀಲು ಸ್ವತ್ತುಗಳನ್ನು ಹೊರತುಪಡಿಸಿ ಮೇಲ್ಕಂಡಂತೆ ವಿವರಿಸಿರುವ ಹಳೆಯ ಮನೆಯಾದ ಹುಸ್ಕೂರು ಗ್ರಾಮದ ಜಂಜರ್ ನಂ.18 ಮತ್ತು ಪೂರ್ವ-ಪಶ್ಚಿಮ 16 ಅಡಿ ಮತ್ತು ಉತ್ತರ-ದಕ್ಷಿಣ 42 ಅಡಿ ಮನೆಯಲ್ಲಿ ವಾಸವಿದ್ದರು. 1996ರ ಪತ್ರದ ವಿಭಾಗದಂತೆ 'ಎ' ಮತ್ತು 'ಬಿ' ದಾವಾಷೆಡ್ಯೂಲ್ ಸ್ವತ್ತುಗಳು ಖಾಲಿ ಜಾಗವಿದ್ದ ಕಾರಣ ಹಾಗು ವಾದಿಗಳ ತಂದೆ ದೇವಣ್ಣರವರು ಮನೆಯ ಹಿರಿಮಗ ಮತ್ತು ಮನೆಗೆ ಯಾಜಮಾನರಾದ ಕಾರಣ 'ಎ' ಮತ್ತು 'ಬಿ' ತಪಶೀಲು ಸ್ವತ್ತುಗಳು ಮತ್ತು ಮೇಲ್ಕಂಡಂತೆ ವಿವರಿಸಿರುವ ಹಳೆಯ ಮನೆಯಾದ ಹುಸ್ಕೂರು ಗ್ರಾಮದ ಜಂಜರ್ ನಂ.18 ಪೂರ್ವ-ಪಶ್ಚಿಮ 16 ಅಡಿ ಮತ್ತು ಉತ್ತರ-ದಕ್ಷಿಣ 42 ಅಡಿ ಮನೆಯು ದೇವಣ್ಣರವರ ಹೆಸರಿನಲ್ಲಿ ಪಂಚಾಯಿತಿಯವರು ಸೇರಿಸಿದ್ದರು. ಆದರೆ ವಿಭಾಗದ ನಂತರ ದೇವಣ್ಣರವರು

'ಎ' ಮತ್ತು 'ಬಿ' ತಪಶೀಲು ಸ್ವತ್ತಿನಲ್ಲಿ ಪೂರ್ವ-ಪಶ್ಚಿಮವಾಗಿ ಹಂಚಿಕೊಂಡಿರುವುದನ್ನು ಬಿಟ್ಟು ಉತ್ತರದ ಕಡೆಗೆ ಸೇರಿದ ಹಾಗೆ ಪಶ್ಚಿಮ ಭಾಗದಲ್ಲಿ ಪ್ರತಿವಾದಿಯ ತಂದೆ ನೀಡಿದ್ದ ಸ್ವತ್ತನ್ನು ಸಹ ಒತ್ತುವರಿ ಮಾಡಿ ಮನೆಕಟ್ಟಿ ದಕ್ಷಿಣದ ಕಡೆಗೆ ಖಾಲಿ ಜಾಗವನ್ನು ಬಿಟ್ಟಿರುತ್ತಾರೆ. ಸದರಿ ಖಾಲಿಜಾಗವೇ ಈ ದಾವೆಯ 'ಬಿ' ತಪಶೀಲು ಸ್ವತ್ತಾಗಿರುತ್ತದೆ.

3.1 ಪ್ರತಿವಾದಿ ಮುಂದುವರಿದು ಹೇಳುವುದೇನೆಂದರೆ ಪ್ರತಿವಾದಿಯ ತಂದೆಯ ವಿಭಾಗಕ್ಕೆ ಬಿಟ್ಟಿದ್ದ ಉತ್ತರ-ದಕ್ಷಿಣದ ಜಾಗವನ್ನು ಒತ್ತುವರಿ ಮಾಡಿದ ಕಾರಣ ಗ್ರಾಮದಲ್ಲಿ ಪಂಚಾಯಿತಿ ಸೇರಿಸಲಾಗಿ ಪಂಚಾಯಿತಿಯವರು ಈ ಮೊದಲು ದಕ್ಷಿಣ ಉತ್ತರವಾಗಿ ಭಾಗ ಮಾಡಿಕೊಂಡಿದ್ದ ಭಾಗವನ್ನು ಕೈ ಬಿಡುವಂತೆ ಈಗಾಗಲೇ ದಕ್ಷಿಣ ಭಾಗದಲ್ಲಿ 'ಬಿ' ಸ್ವತ್ತು ಖಾಲಿ ಇರುವ ಕಾರಣ ಸದರಿ ಸ್ವತ್ತನ್ನು ಪ್ರತಿವಾದಿಗೆ ನೀಡುವಂತೆ ತಿಳಿಸಿರುತ್ತಾರೆ, ಈ ಸಂಬಂಧ ವಾದಿಗಳು ಮತ್ತು ಪ್ರತಿವಾದಿ ದಿನಾಂಕ 03/06/2017ರಂದು ನಂಜನಗೂಡು ವಕೀಲರ ಕಛೇರಿಗೆ ಬಂದು ನೋಟರಿ ವಕೀಲರ ಮೂಲಕ 'ಎ' ಮತ್ತು 'ಬಿ' ತಪಶೀಲು ಸ್ವತ್ತಿನ ಪೈಕಿ 'ಬಿ' ತಪಶೀಲು ಸ್ವತ್ತಿನ ಭಾಗವನ್ನು ಹಾಗು ಮತ್ತೊಂದು ಹಳೆಯ ಮನೆಯಾದ ಜಂಜರ್ ನಂ.18 ಪೂರ್ವ-ಪಶ್ಚಿಮ 16 ಅಡಿ, ಉತ್ತರ- ದಕ್ಷಿಣ 42 ಅಡಿ ಮನೆಗೆ ಸಂಬಂಧಿಸಿದಂತೆ ಅರ್ಧಭಾಗವನ್ನು ವಾದಿಗಳು ಪ್ರತಿವಾದಿಗೆ ಬಿಟ್ಟುಕೊಡಲು ಒಪ್ಪಿ ಒಂದು ಒಪ್ಪಿಗೆ ಪ್ರಮಾಣ ಪತ್ರವನ್ನು ನೋಟರಿ ವಕೀಲರ ಮಾಡಿಕೊಟ್ಟಿರುತ್ತಾರೆ. ದೇವಣ್ಣರವರು ಲೇಟ್.ಪರಮೇಶ್ವರಪ್ಪನವರ ಮೊದಲನೇ ಮಗನಾದ ಕಾರಣ ಹಾಗು ಮನೆಯ ಯಾಜಮಾನರಾದ ಕಾರಣ ಈಗಲೂ ಸದರಿ ಸ್ವತ್ತುಗಳು ವಾದಿಗಳ ತಂದೆ ದೇವಣ್ಣರವರ ಹೆಸರಿನಲ್ಲಿ ಮುಂದುವರೆದಿದ್ದು, ವಾದಿ ಮತ್ತು ಪ್ರತಿವಾದಿ ದಾವಾ ತಪಶೀಲು ಸ್ವತ್ತುಗಳಲ್ಲಿ ಜಂಟಿ ಸ್ವಾಧೀನಾನುಭವದಲ್ಲಿರುತ್ತಾರೆ.

3.2 ಪ್ರತಿವಾದಿ ಮುಂದುವರಿದು ಹೇಳುವುದೇನೆಂದರೆ, ಖಾತಾ ಬದಲಾವಣೆ

ವಿಚಾರವಾಗಿ ಮತ್ತು ದಾವಾ ತಪಶೀಲು ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗಪತ್ರ ಮಾಡಿಕೊಡುವಂತೆ ಅನೇಕ ಬಾರಿ ವಾದಿಗಳನ್ನು ಕೇಳಿದಾಗ ವಾದಿಗಳು ಒಂದಲ್ಲ ಒಂದು ಸಬೂಬು ಹೇಳುತ್ತಾ ಮುಂದುವರೆಯುತ್ತಾ ಬಂದಿರುತ್ತಾರೆ. ಆದರೆ ಇತ್ತೀಚಿಗೆ ವಾದಿಗಳು 'ಬಿ' ಷೆಡ್ಯೂಲ್ ಸ್ವತ್ತನ್ನು ಅಂದರೆ ಪ್ರತಿವಾದಿಯ ಭಾಗಕ್ಕೆ ನೀಡಲು ಉದ್ದೇಶಿಸಿದ್ದ ಸ್ವತ್ತಿನಲ್ಲಿ ಕೊಟ್ಟಿಗೆ ನಿರ್ಮಾಣ ಮಾಡಲು ಪ್ರಯತ್ನಿಸಿದ್ದರಿಂದ ಈ ಬಗ್ಗೆ ವಾದಿಗಳನ್ನು ಪ್ರಶ್ನೆಮಾಡಲಾಗಿ ವಾದಿಗಳು ಪ್ರತಿವಾದಿಯ ವಿರುದ್ಧ ಸದರಿ ಸ್ವತ್ತು ತಮ್ಮದೇ ಸ್ವತ್ತು ಎಂದು ಗಲಾಟೆ ಮಾಡಿ ದಾವಾ ತಪಶೀಲು ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತಾರೆ. ದಾವಾ ತಪಶೀಲು ಸ್ವತ್ತು ಮೂಲತ: ಲೇಟ್.ಪರಮೇಶ್ವರಪ್ಪರವರ ಕಟುಂಬಸ್ಥರಿಗೆ ಸೇರಿದ ನೀವೇಶನ ಮತ್ತು ಮನೆಯಾಗಿದ್ದು ವಾದಿಗಳು ಮತ್ತು ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತುಗಳಾಗಿರುತ್ತದೆ. ದಾವಾ ತಪಶೀಲು ಸ್ವತ್ತುಗಳಲ್ಲಿ ಪ್ರತಿವಾದಿಗೂ ಭಾಗಾಂಶವಿರುವುದರಿಂದ ಪ್ರತಿವಾದಿ ವಿಭಾಗ ಕೇಳುವ ಹಕ್ಕು ಉಳಿಸಿಕೊಂಡಿರುತ್ತಾರೆ. ಎ ಮತ್ತು ಬಿ ತಪಶೀಲು ಸ್ವತ್ತುಗಳು ವಾದಿಗಳ ಮತ್ತು ಪ್ರತಿವಾದಿಯ ತಂದೆಯ ಖಾಲಿ ಜಾಗವಾಗಿದ್ದು, ಸದರಿ ಸ್ವತ್ತಿನ ವಿಸ್ತೀರ್ಣ ಪೂರ್ವ- ಪಶ್ಚಿಮ 30 ಅಡಿ, ದಕ್ಷಿಣ-ಉತ್ತರ 81 ಅಡಿಯಾಗಿದ್ದು, ಸದರಿ ಸ್ವತ್ತು ಪೂರ್ವ- ಪಶ್ಚಿಮವಾಗಿ 15x81ರಂತೆ ಸುಮಾರು ಹಂಚಿಕೆ ಮಾಡಿಕೊಂಡಿದ್ದು ಅದರ ಪೈಕಿ ಪೂರ್ವದ ಕಡೆಗೆ ವಾದಿಗಳ ತಂದೆ ದೇವಣ್ಣರವರಿಗೆ ಹಾಗು ಪಶ್ಚಿಮದ ಕಡೆಗೆ ಪ್ರತಿವಾದಿಗಳ ತಂದೆ ಸಣ್ಣಪ್ಪರವರಿಗೆಂದು ವಿಭಾಗ ಮಾಡಿಕೊಂಡಿರುತ್ತಾರೆ. ಅದರೆ ದೇವಣ್ಣರವರು ತಮ್ಮ ಹೆಸರಿಗೆ ಖಾತೆ ದಾಖಲೆಗಳಿರುವುದನ್ನು ದುರುಪಯೋಗಪಡಿಸಿಕೊಂಡು ಈ ಹಿಂದೆ ಮಾಡಿಕೊಂಡಿದ್ದ ವಿಭಾಗವನ್ನು ಹೊರತುಪಡಿಸಿ. ಉತ್ತರದ ಕಡೆಗೆ ಮನೆ ಮಾಡಿದ್ದು ಪ್ರತಿವಾದಿಯ ತಂದೆಗೆ ಸೇರಿದ್ದ ಪಶ್ಚಿಮದ ಭಾಗವನ್ನು ಒತ್ತುವರಿ ಮಾಡಿ ಮನೆಕಟ್ಟಿದ್ದು ಅದೇ ಸ್ವತ್ತು "ಈಗ ಸದರಿ ದಾವೆಯಲ್ಲಿ 'ಎ' ಸ್ವತ್ತಾಗಿದ್ದು

ಉಳಿಕೆ ಸ್ವತ್ತು ಸದರಿ ಈ ದಾವೆಯ 'ಬಿ' ಸ್ವತ್ತಾಗಿರುತ್ತದೆ. ಪ್ರತಿವಾದಿಯು ದಾವಾ ತಪಶೀಲು ಸ್ವತ್ತಿಗೆ ಸಂಬಂಧಿಸದಂತೆ ಸಹ-ಹಕ್ಕುದಾರರಾಗಿದ್ದು, ಈ ದಾವೆ ಕಾನೂನಿನಡಿಯಲ್ಲಿ ಊರ್ಜಿತವಾಗತಕ್ಕದ್ದಲ್ಲ, ದಾವಾ ತಪಶೀಲು ಸ್ವತ್ತು ಮೂಲತ: ಪರಮೇಶ್ವರಪ್ಪರರವರಿಗೆ ಸೇರಿದ ಸ್ವತ್ತಾಗಿದ್ದು, ಅವರು ಮೃತಪಟ್ಟ ನಂತರ ಅವರ ಮೊದಲನೇ ಮಗನಾದ ದೇವಣ್ಣನವರು ಮನೆಗೆ ಯಾಜಮಾನರಾಗಿದ್ದ ಕಾರಣ ದಾವಾ ತಪಶೀಲು ಸ್ವತ್ತು ದೇವಣ್ಣರವರ ಹೆಸರಿನಲ್ಲಿರುತ್ತದೆ. ವಾದಿಗಳು ಶುದ್ಧಹಸ್ತದಿಂದ ನ್ಯಾಯಾಲಯವನ್ನು ಸಂಪರ್ಕಿಸಿರುವುದಿಲ್ಲ ಮತ್ತು ವಾದಿಗಳು ಮತ್ತು ಪ್ರತಿವಾದಿಯ ನಡುವೆ ಇರುವ ಸಂಬಂಧವನ್ನು ಮರೆಮಾಚಿ ದಾವಾ ತಪಶೀಲು ಸ್ವತ್ತುಗಳು ವಾದಿಗಳ ತಂದೆಗೆ ಹೇಗೆ ಬಂದಿರುತ್ತದೆಂಬುದನ್ನು ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ. ಆದ್ದರಿಂದ ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ವಾದಿಗಳು ಸಲ್ಲಿಸಿರುವ ಮಧ್ಯಕಾಲೀನ ಅರ್ಜಿ ಸಂಖ್ಯೆ-1 ನ್ನು ವಜಾಗೊಳಿಸುವಂತೆ ಕೇಳಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ಈ ನ್ಯಾಯಾಲಯದ ಅವಗಾಹನೆಗೆ ಕೆಳಕಂಡ ಅಂಶಗಳು ಮೂಡಿಬಂದಿರುತ್ತವೆ:-

1. ಈ ದಾವೆಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ:1 ರಲ್ಲಿ ಕೇಳಿರುವಂತೆ ವಾದಿಗಳು ತಮ್ಮ ಪರವಾಗಿ ಮೇಲ್ನೋಟಕ್ಕೆ ಪ್ರಕರಣವಿದೆ ಎಂದು ರುಜುವಾತುಪಡಿಸುವರೇ?

2. ಅನುಕೂಲತೆಯ ತಕ್ಕಡಿ ತನ್ನ ಪರವಾಗಿದೆ ಎಂದು ವಾದಿಗಳು ರುಜುವಾತುಪಡಿಸುವರೇ?

3. ಒಂದು ವೇಳೆ ಮಧ್ಯಕಾಲೀನ ಅರ್ಜಿ ಸಂಖ್ಯೆ:1 ನ್ನು ಪುರಸ್ಕರಿಸದೇ ಇದ್ದಲ್ಲಿ ವಾದಿಗಳಿಗೆ ತುಂಬಲಾರದ ನಷ್ಟವಾಗುತ್ತದೆ ಎಂದು ರುಜುವಾತುಪಡಿಸುವರೇ?

4. ಯಾವ ಆದೇಶ?

5. ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಃ–

ಅಂಶ 1 ರಿಂದ 3: ನಕಾರಾತ್ಮಕವಾಗಿ

ಅಂಶ :4 : ಅಂತಿಮ ಆದೇಶದ ಪ್ರಕಾರ:–

**ಕಾರಣಗಳು**

6. **ಅಂಶ 1 ರಿಂದ 3:–** ಈ ಮೂರು ಅಂಶಗಳು ಒಂದಕ್ಕೊಂದು ಅಂತರ್ಗತವಾಗಿದ್ದು ವಸ್ತು ಸಂಗತಿ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಮೂರು ಅಂಶಗಳನ್ನು ಒಟ್ಟಿಗೆ ಗಣನೆಗೆ ತೆಗೆದುಕೊಳ್ಳಲಾಗಿದೆ.

7. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಮಂಜೂರಾತಿಗೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಮಾರ್ಗದರ್ಶಿ ತತ್ವವನ್ನು "**Seema Arshad Zaheer and Others v Municipal Corporation of Greater Mumbai and Others**, (2006) 5 SCC 282, ಎಂದು ವರದಿಯಾಗಿರುವ ತೀರ್ಪಿನಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡುವ ಸಂದರ್ಭದಲ್ಲಿ ಪರಿಗಣಿಸಬಹುದಾದ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿರುತ್ತದೆಃ–

> "30. The discretion of the Court is exercised to grant a temporary injunction only when the following requirements are made out by the plaintiff;
>
> (i) existence of a prima-facie case as pleaded, necessitating protection of the plaintiff's rights by issue of a temporary injunction;
>
> (ii) when the need for protection of the plaintiffs rights is compared with or weighed against the need for protection of the defendants rights or likely infringement of the defendant's rights, the balance of convenience tilting in favour of the plaintiff; and

(iii) clear possibility of irreparable injury being caused to the plaintiff if the temporary injunction is not granted. In addition, temporary injunction being an equitable relief, the discretion to grant such relief will be exercised only when the plaintiffs' conduct is free from blame and he approaches the Court with clean hands."

8. ತಾತ್ಕಾಲಿಕ ನಿರ್ಬಂಧಕಾಜ್ಞೆ ಹೊರಡಿಸುವುದು ನ್ಯಾಯಾಲಯದ ವಿವೇಚನೆಗೆ ಒಳಪಟ್ಟಿರುತ್ತದೆ. ಒಂದು ವೇಳೆ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸದರಿ ದಾಖಲಾತಿಗಳು ಧನಾತ್ಮಕವಾಗಿ ಕಂಡುಬಂದಾಗ ನ್ಯಾಯಾಲಯದ ವಿವೇಚನೆಗೆ ಆಧಾರವಾಗುತ್ತದೆ. ಯಾವುದೇ ಅರ್ಜಿದಾರರು ತಾವು ಪಾಲಿಸಬೇಕಾದ ನಿಯಮಗಳನ್ನು ಪಾಲಿಸದಿದ್ದರೆ ಆತನ ಪರವಾಗಿ ಮೌಲ್ಯವು ಕುಂಠಿತವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡುವುದಕ್ಕೆ ಬಾಧಕವಾಗುತ್ತದೆ. ಅದೇ ರೀತಿ ನ್ಯಾಯದಾನ ಮತ್ತು ನ್ಯಾಯಾಲಯದ ಕ್ರಮಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಯಲು ನ್ಯಾಯಾಲಯವು ಆದೇಶವನ್ನು ಹೊರಡಿಸಲು ಹೊಂದಿರುವ ಅಧಿಕಾರಗಳ ಸಂಬಂಧ ನ್ಯಾಯಾಲಯವು ಕ್ರಮಾದೇಶ 39 ರಡಿಯಲ್ಲಿ ಪರಿಗಣಿಸಲಾಗದ ಸಂದರ್ಭಗಳಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ಅಂತರ್ಗತ ಅಧಿಕಾರವನ್ನು ಹೊಂದಿರುತ್ತದೆ. ಅದೇ ರೀತಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಾಗ ನ್ಯಾಯಾಲಯವು ತಳೆಯಬಹುದಾದ ವಿವೇಚಾನಾಧಿಕಾರವು ಕೇವಲ ಕೆಳಕಂಡ ವಾದಿಯ ಅಗತ್ಯತೆಗಳನ್ನು ಆಧರಿಸುತ್ತದೆ.

(1) ವಾದಿ ಕೋರಿದಂತೆ ಆತನ ಹಕ್ಕುಗಳನ್ನು ಕಾಪಾಡಲು ಅವಶ್ಯಕವಾದ ಮೇಲ್ನೋಟಕ್ಕೆ ಸಾಬೀತು ಪಡಿಸಬಹುದಾದ ಅಂಶಗಳು ಅಸ್ತಿತ್ವದಲ್ಲಿ ಇದೆಯೇ ಎಂಬುದನ್ನು ಪರಿಗಣಿಸಬೇಕು,

(2) ವಾದಿ ಮತ್ತು ಪ್ರತಿವಾದಿಯರು ತಮ್ಮ ಹಕ್ಕುಗಳ ರಕ್ಷಣೆಯ ಸಂಬಂಧ ಹೊಂದಿರುವ ಅಂಶಗಳ ತುಲನೆಯಲ್ಲಿ ವಾದಿಯ ಪರ ಹೆಚ್ಚಿನ ಪಾಲು ಇರುವುದು,

(3) ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪ್ರಧಾನ ಮಾಡದಿದ್ದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗಬಹುದು ಎಂಬ ವಿವೇಚನೆಗಳು ಕಂಡು ಬರಬೇಕು. ಇದರೊಂದಿಗೆ ತಾತ್ಕಾಲಿಕ ತಡೆಯಾಜ್ಞೆಯು ಒಂದು ಸಮಾನ ರೀತಿಯ ಪರಿಹಾರವಾಗಿರುವುದರಿಂದ ಅಂತಹ ಪರಿಹಾರವನ್ನು ಪ್ರಧಾನ ಮಾಡುವುದರಲ್ಲಿ ವಿವೇಚಾನಾಧಿಕಾರವನ್ನು ವಾದಿಯು ನ್ಯಾಯಾಲಯವನ್ನು ಯಾವುದೇ ದುರುದ್ದೇಶವಿಲ್ಲದೇ ಶುದ್ಧ ಹಸ್ತದಿಂದ ಸಂಪರ್ಕಿಸಿದರೆ ಮಾತ್ರ ಚಲಾಯಿಸಬೇಕಾಗುತ್ತದೆ.

9. ಪ್ರಸ್ತುತ ಪ್ರಕರಣದಲ್ಲಿ ವಾದಿಗಳು ತಮ್ಮ ಪರವಾಗಿ ಮೇಲ್ನೋಟಕ್ಕೆ ಪ್ರಕರಣವಿದೆ ಇದೆ ಎಂದು ತೋರಿಸಲು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಃ–

| | |
|---|---|
| 1) | ಅಸೆಸ್‌ಮೆಂಟ್‌ನ ಪ್ರತಿ |
| 2) | ತೆರಿಗೆ ಪಾವತಿ ರಶೀದಿಗಳು |
| 3) | ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯವರು ನೀಡಿರುವ ಸ್ವೀಕೃತಿ. |
| 4) | ಋಣಭಾರ ರಾಹಿತ್ಯ ಪ್ರಮಾಣ ಪತ್ರ. |
| 5) | ಭಾವಚಿತ್ರ ಮತ್ತು ಫೋಟೋ ಸ್ಟುಡಿಯೋದವರು ನೀಡಿರುವ ರಶೀದಿ |
| 6) | ದೋಷಾರೋಪಣಾಪಟ್ಟಿಯ ಪ್ರತಿ |
| 7) | ಸಿ.ಸಿ.931/2017 ರ ಆದೇಶ ಪುಟದ ದೃಢೀಕೃತ ಪ್ರತಿ |

10. ಪ್ರತಿವಾದಿಗಳು ತಮ್ಮ ಪರವಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಃ-

| | |
|---|---|
| 1) | ವಂಶವೃಕ್ಷ ಪ್ರಮಾಣ ಪತ್ರ |
| 2) | ನೋಂದಾಯಿತವಲ್ಲದ ವಿಭಾಗಪತ್ರ |
| 3) | ಒಪ್ಪಿಗೆ ಪ್ರಮಾಣ ಪತ್ರ |
| 4) | ಗಣಕೀಕೃತ ಪಹಣಿ ಪತ್ರಿಕೆಗಳು |

11. ಪ್ರಸ್ತುತ ಪ್ರಕರಣದಲ್ಲಿ ವಾದಿಗಳ ನಿಲುವೇನೆಂದರೆ, ದೇವಣ್ಣರವರು ಮೃತಪಟ್ಟ ನಂತರ ದಾವಾ ತಪಶೀಲು ಸ್ವತ್ತಿನಲ್ಲಿ ಮಾಲೀಕತ್ವ ಹೊಂದಿ ಸ್ವಾಧೀನಾನುಭವದಲ್ಲಿದ್ದು, ದೇವಣ್ಣರವರು ತಮ್ಮ ಜೀವಿತಾವಧಿಯಲ್ಲಿ 'ಎ' ತಪಶೀಲು ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಿದ್ದು, ದಕ್ಷಿಣದ ಕಡೆ ಇದ್ದ ಮನೆ ಶಿಥಿಲವಾಗಿ ಬಿದ್ದು ಹೋಗಿದ್ದು, ಪ್ರಸ್ತುತ ಖಾಲಿ ಜಾಗವಾಗಿರುತ್ತದೆ. ಸದರಿ ಜಾಗವೇ ಬಿ ತಪಶೀಲು ಸ್ವತ್ತಾಗಿರುತ್ತದೆಂಬುದಾಗಿರುತ್ತದೆ. ಪ್ರತಿವಾದಿಯ ನಿಲುವೇನೆಂದರೆ, ವಾದಿಗಳ ತಂದೆ ಮತ್ತು ಪ್ರತಿವಾದಿ ತಂದೆ ಸಹೋದರರಾಗಿದ್ದು, 'ಎ' ಮತ್ತು 'ಬಿ' ತಪಶೀಲು ಸ್ವತ್ತುಗಳಿಗೆ ಸಂಬಂಧಿಸಿದಂತೆ ಹಾಗು ಹುಸ್ಕೂರು ಗ್ರಾಮದಲ್ಲಿರುವ ಮನೆಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿದ್ದು, ಪೂರ್ವಾರ್ಧ ಭಾಗವನ್ನು ವಾದಿಗಳ ತಂದೆ ದೇವಣ್ಣರವರಿಗು ಮತ್ತು ಪಶ್ಚಿಮಾರ್ಧ ಭಾಗವನ್ನು ಪ್ರತಿವಾದಿಗಳ ತಂದೆ ಸಣ್ಣಪ್ಪರವರಿಗೆಂದು ವಿಭಾಗ ಮಾಡಿಕೊಂಡಿದ್ದರು. ಆದರೆ 'ಎ' ಮತ್ತು 'ಬಿ' ತಪಶೀಲು ಸ್ವತ್ತುಗಳಲ್ಲಿ ಪೂರ್ವ-ಪಶ್ಚಿಮವಾಗಿ ಹಂಚಿಕೊಂಡಿರುವುದನ್ನು ಬಿಟ್ಟು ಉತ್ತರದ ಕಡೆಗೆ ಸೇರಿದ ಹಾಗೆ ಪಶ್ಚಿಮ ಭಾಗದಲ್ಲಿ ಪ್ರತಿವಾದಿಯ ತಂದೆ ನೀಡಿದ್ದ ಸ್ವತ್ತನ್ನು ಸಹ ಒತ್ತುವರಿ ಮಾಡಿ ಮನೆಕಟ್ಟಿ ದಕ್ಷಿಣದ ಕಡೆಗೆ ಖಾಲಿ ಜಾಗವನ್ನು ಬಿಟ್ಟಿರುತ್ತಾರೆ.

ಸದರಿ ಖಾಲಿ ಜಾಗವೇ 'ಬಿ' ತಪಶೀಲು ಸ್ವತ್ತಾಗಿರುತ್ತದೆ. ಈ ವಿಚಾರವಾಗಿ ಗ್ರಾಮದಲ್ಲಿ ಪಂಚಾಯ್ತಿ ನಡೆದು ಈ ಮೊದಲು ದಕ್ಷಿಣೋತ್ತರವಾಗಿ ಮಾಡಿಕೊಂಡಿದ್ದ ಭಾಗವನ್ನು ಕೈಬಿಡುವಂತೆ ಈಗಾಗಲೇ ದಕ್ಷಿಣ ಭಾಗದಲ್ಲಿ 'ಬಿ' ತಪಶೀಲು ಸ್ವತ್ತು ಇರುವ ಕಾರಣ ಸದರಿ ಸ್ವತ್ತನ್ನು ಪ್ರತಿವಾದಿಗೆ ನೀಡುವಂತೆ ತಿಳಿಸಿದ್ದು, ಈ ಬಗ್ಗೆ ದಿನಾಂಕ 03.06.2017 ರಂದು ಒಪ್ಪಿಗೆ ಪ್ರಮಾಣಪತ್ರ ಬರೆದುಕೊಟ್ಟಿರುತ್ತಾರೆಂದು ನಿಲುವು ತೆಗೆದುಕೊಂಡಿರುತ್ತಾರೆ.

12. ವಾದಿಗಳು ಮತ್ತು ಪ್ರತಿವಾದಿ ತೆಗೆದುಕೊಂಡಿರುವ ನಿಲುವುಗಳನ್ನು ಪರಿಶೀಲಿಸಿದಾಗ, ವಾದಿಗಳು ಮತ್ತು ಪ್ರತಿವಾದಿ ಸಂಬಂಧಿಕರಾಗಿದ್ದು, ಇವರ ತಂದೆ ದೇವಣ್ಣ ಮತ್ತು ಸಣ್ಣಪ್ಪ ಸಹೋದರರಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಪ್ರತಿವಾದಿ ಹಾಜರುಪಡಿಸಿರುವ ವಿಭಾಗಪತ್ರ ಹಾಗು ಒಪ್ಪಿಗೆ ಪ್ರಮಾಣಪತ್ರವನ್ನು ಪರಿಶೀಲಿಸಿದಾಗ, ವಾದಿಗಳು ಪ್ರತಿವಾದಿಗೆ ಒಪ್ಪಿಗೆ ಪ್ರಮಾಣಪತ್ರ ಮಾಡಿಕೊಡುವ ಮೂಲಕ ದಾವಾ ತಪಶೀಲು ಸ್ವತ್ತನ್ನು ಪ್ರತಿವಾದಿಯ ಸ್ವಾಧೀನಕ್ಕೆ ನೀಡಿರುವ ಬಗ್ಗೆ ಉಲ್ಲೇಖವಿರುತ್ತದೆ ಮತ್ತು ಈ ಅಂಶವನ್ನು ಅಲ್ಲಗಳೆಯಲು ವಾದಿಗಳು ಯಾವುದೇ ಪ್ರತಿ ಹೇಳಿಕೆ ಸಲ್ಲಿಸಿರುವುದಿಲ್ಲ.

13. ವಾದಿಗಳು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಈ ದಾವೆ ಸಲ್ಲಿಸಿದ್ದು, ಇವರು ತಮ್ಮ ತಂದೆ ಮೃತಪಟ್ಟ ನಂತರ ಸ್ವಾಧೀನದಲ್ಲಿರುತ್ತೇವೆಂದು ಹೇಳಿದ್ದು, ಪ್ರತಿವಾದಿ ವಾದಿಗಳ ಸ್ವಾಧೀನವನ್ನು ಪ್ರಶ್ನಿಸಿ ವಿವಾದಿತ ಸ್ವತ್ತನ್ನು ಒಪ್ಪಿಗೆ ಪ್ರಮಾಣಪತ್ರ ಮಾಡಿಕೊಡುವ ಮೂಲಕ ಪ್ರತಿವಾದಿಗೆ ನೀಡಿರುತ್ತಾರೆಂದು ವಾದಿಗಳ ಮಾಲೀಕತ್ವವನ್ನೇ ಅಲ್ಲಗಳೆದಿರುತ್ತಾರೆ ಮತ್ತು ಸದರಿ ನಿಲುವಿಗೆ ಪೂರಕವಾಗಿ ದಾಖಲೆಗಳನ್ನೂ ಕೂಡ ಹಾಜರುಪಡಿಸಿರುತ್ತಾರೆ. ವಾಸ್ತವಾಂಶ ಹೀಗಿರುವಾಗ, ವಾದಿಗಳ ತಂದೆ ಮೃತಪಟ್ಟ ನಂತರ ತಮ್ಮ ಮತ್ತು ಪ್ರತಿವಾದಿಯ ನಡುವಿನ ಸಂಬಂಧದ ಬಗ್ಗೆ ಮತ್ತು ಈ ಹಿಂದೆ ನಡೆದಿರುವ ವಿಷಯಗಳ ಬಗ್ಗೆ ಎಲ್ಲಿಯೂ ಪ್ರಸ್ತಾಪಿಸದೆ ಸ್ವಾಧೀನದಲ್ಲಿರುತ್ತೇವೆಂದು ವಾದಿಗಳು

ತೆಗೆದುಕೊಂಡಿರುವ ನಿಲುವನ್ನು ಈ ಹಂತದಲ್ಲಿ ಪರಿಗಣಿಸಲಾಗುವುದಿಲ್ಲ.

14. ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ವಾದಿಗಳ ತಂದೆ ಮತ್ತು ಪ್ರತಿವಾದಿಯ ತಂದೆ ನಡುವೆ ವಿಭಾಗವಾಗಿದ್ದು, ಆ ನಂತರ ಗ್ರಾಮದಲ್ಲಿ ಪಂಚಾಯಿತಿ ನಡೆದು ವಾದಿಗಳು ಪ್ರತಿವಾದಿಯ ಹೆಸರಿಗೆ ಒಪ್ಪಿಗೆ ಪ್ರಮಾಣಪತ್ರ ಬರೆದುಕೊಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಈ ಅಂಶವನ್ನು ಅಲ್ಲಗಳೆಯಲು ವಾದಿಗಳು ಯಾವುದೇ ಪ್ರತಿಹೇಳಿಕೆ (Replication) ಸಲ್ಲಿಸಿರುವುದಿಲ್ಲ. ಆದ್ದರಿಂದ , ವಾದಿಗಳು ಹಾಜರುಪಡಿಸಿರುವ ದಾಖಲೆಗಳು ವಾದಿಗಳ ಪರವಾಗಿ ಮೆಲ್ನೋಟಕ್ಕೆ ಪ್ರಕರಣವಿದೆ ಎಂದು ಪರಿಗಣಿಸಲಾಗುವುದಿಲ್ಲ. ನ್ಯಾಯಾಲಯಕ್ಕೆ ಪರಿಹಾರ ಕೇಳಿ ಬರುವ ಪಕ್ಷಗಾರರು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಸಂಗತಿಗಳನ್ನು ಪ್ರಾಮಾಣಿಕವಾಗಿ ಬಹಿರಂಗಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಎಂಬುದು ಕಾನೂನಿನ ತತ್ವವಾಗಿದೆ. ತಡೆಯಾಜ್ಞೆ ಕೇಳಿ ನ್ಯಾಯಾಲಯವನ್ನು ಸಂಪರ್ಕಿಸುವ ವ್ಯಕ್ತಿ ತನ್ನ ಹಕ್ಕಿನ ನಿರ್ಣಯಕ್ಕೆ ಸಂಬಂಧಿಸಿದ ಎಲ್ಲಾ ಸಂಗತಿಗಳನ್ನು ನ್ಯಾಯಾಲಯದ ಗಮನಕ್ಕೆ ತರುವುದು ಸದರಿ ವ್ಯಕ್ತಿಯ ಕರ್ತವ್ಯವಾಗಿರುತ್ತದೆ. ಒಂದು ವೇಳೆ ಆ ವ್ಯಕ್ತಿ ನ್ಯಾಯ ಸಮ್ಮತವಾಗಿ ವರ್ತಿಸದಿದ್ದರೆ ಮತ್ತು ನ್ಯಾಯಾಲಯದ ಮುಂದೆ ಪ್ರತಿಯೊಂದು ವಸ್ತುಸಂಗತಿಯನ್ನು ನ್ಯಾಯಾಲಯದ ಗಮನಕ್ಕೆ ತರದಿದ್ದರೆ, ತಡೆಯಾಜ್ಞೆ ನೀಡುವಂತಹ ಸಂಗತಿಗಳಿದ್ದರೂ ಸಹ, ನ್ಯಾಯಾಲಯವು ಸದರಿ ವ್ಯಕ್ತಿಗೆ ತಡೆಯಾಜ್ಞೆ ನೀಡಲು ನಿರಾಕರಿಸುವ ಅಂತರ್ಗತ ಅಧಿಕಾರವನ್ನು ಹೊಂದಿರುತ್ತದೆ. ಪಕ್ಷಗಾರರ ನಡವಳಿಕೆಯು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ವಾಸ್ತವಾಂಶಗಳನ್ನು ಮತ್ತು ನ್ಯಾಯಾಲಯದ ಮುಂದೆ ಸತ್ಯಗಳನ್ನು ಬಹಿರಂಗಪಡಿಸುವುದು ಪ್ರಮುಖವಾಗಿರುತ್ತದೆ. ಪಕ್ಷಗಾರರು ನ್ಯಾಯಾಲಯಕ್ಕೆ ವಾಸ್ತವಾಂಶ ಮತ್ತು ತಮ್ಮ ಜ್ಞಾನದಲ್ಲಿರುವ ಎಲ್ಲಾ ವಸ್ತುಸಂಗತಿಗಳ ಸಂಪೂರ್ಣ ಸಂಭವನೀಯ ಬಹಿರಂಗಪಡಿಸುವಿಕೆ

ಯನ್ನು ಮಾಡಬೇಕಾಗಿರುತ್ತದೆ ಮತ್ತು ಪಕ್ಷಗಾರರು ಸಾಧ್ಯವಾದಷ್ಟು ಎಲ್ಲಾ ವಾಸ್ತವಾಂಶ ಗಳನ್ನು ಸಂಪೂರ್ಣವಾಗಿ ಬಹಿರಂಗಪಡಿಸದಿದ್ದರೆ ಸದರಿ ಪಕ್ಷಗಾರ ತನ್ನ ಪ್ರಕ್ರಿಯೆಯಿಂದ ಯಾವುದೇ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲ.

15. ಈ ಮೇಲೆ ಚರ್ಚಿಸಿದ ಸಂಗತಿಗಳ ಆಧಾರದ ಮೇಲೆ ಪ್ರತಿವಾದಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಾವಾ ಸ್ವತ್ತಿನಲ್ಲಿ ವಾದಿಗಳೇ ಸ್ವಾಧೀನದಲ್ಲಿರುತ್ತಾರೆಂಬುದು ಈ ಹಂತದಲ್ಲಿ ಪ್ರಶ್ನಾರ್ಥಕವಾಗಿರುತ್ತದೆ. ಉಭಯ ಪಕ್ಷಗಾರರು ಒಪ್ಪಿಕೊಂಡಿರುವಂತೆ ದಾವಾ ಬಿ ತಪಶೀಲು ಸ್ವತ್ತು ಖಾಲಿ ನಿವೇಶನವಾಗಿದ್ದು, ಈ ಬಗ್ಗೆ ವಾದಿಗಳು ಮತ್ತು ಪ್ರತಿವಾದಿಗಳು ತಾವೇ ಸ್ವಾಧೀನದಲ್ಲಿರುವುದಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು, ಪ್ರತಿವಾದಿ ವಾದಿಗಳ ಮಾಲೀಕತ್ವವನ್ನು ಪ್ರಶ್ನಿಸಿರುತ್ತಾರೆ. ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಾರರ ನಡುವೆ ಮಾಲೀಕತ್ವ ವಿವಾದದಲ್ಲಿದ್ದರೆ ಕೇವಲ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಿದ ದಾವೆ ಊರ್ಜಿತವಾಗುವುದಿಲ್ಲ. ಈ ಹಂತದಲ್ಲಿ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪನ್ನು ಉಲ್ಲೇಖಿತಬೇಕಾಗುತ್ತದೆ. ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು **Anatulla Sudhakar Vs. P.Buchi Reddy (2008) 4 SCC 594**, ಎಂದು ವರದಿಯಾಗಿರುವ ತೀರ್ಪಿನಲ್ಲಿ ಈ ರೀತಿ ತೀರ್ಪು ನೀಡಿರುತ್ತದೆ.

> "Where the plaintiff is in possession, but his title to the property is in dispute, or under a cloud, or where the defendant asserts title thereto and there is also a threat of dispossession from defendant, the plaintiff will have to sue for declaration of title and the consequential relief of injunction. Where the title of plaintiff is under cloud, or in dispute, and he is not in possession or not able to establish possession, necessarily the plaintiff will have to

file a suit for declaration, possession and injunction."

16. ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿ ತನ್ನ ಪರವಾಗಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗಪತ್ರ ಮತ್ತು ಒಪ್ಪಿಗೆ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು, ವಾದಿಗಳ ಸ್ವಾಧೀನ ಮತ್ತು ಮಾಲೀಕತ್ವವನ್ನು ಪ್ರಶ್ನಿಸಿರುತ್ತಾರೆ. ಹೀಗಿರುವಾಗ ಕೇವಲ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಿದ ದಾವೆ ಊರ್ಜಿತವಾಗತಕ್ಕದಲ್ಲ. ಇದಕ್ಕೆ ಸಂಬಂಧಿಸಿದಂತೆ ವಾದಿಗಳು ಮಾಲೀಕತ್ವ ಘೋಷಣೆಗಾಗಿ ಅವಶ್ಯಕ ಪರಿಹಾರವನ್ನು ಕೇಳಬೇಕಾಗುತ್ತದೆ ಮತ್ತು ಉಭಯ ಪಕ್ಷಗಾರರು ಖಾಲಿ ಸ್ವತ್ತಿಗೆ ಸಂಬಂಧಿಸಿದಂತೆ ಸ್ವಾಧೀನ ಕೇಳುತ್ತಿರುವುದರಿಂದ ಈ ಹಂತದಲ್ಲಿ ವಾದಿಗಳೇ ಸ್ವಾಧೀನದಲ್ಲಿರುತ್ತಾರೆ ಎಂದು ಅಭಿಪ್ರಾಯಕ್ಕೆ ಬರಲಾಗುವುದಿಲ್ಲ. ಆದ್ದರಿಂದ ವಾದಿಗಳು ತಮ್ಮ ಪರವಾಗಿ ಮೇಲ್ನೋಟಕ್ಕೆ ಪ್ರಕರಣವಿದೆ ಎಂದು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಈ ಮೇಲೆ ಚರ್ಚಿಸಿದ ಕಾರಣಗಳಿಂದಾಗಿ ಅಂಶ-1 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

17. **ಅಂಶ 2 ಮತ್ತು 3**:- ವಾದಿಗಳು ತಮ್ಮ ಪರವಾಗಿ ಮೇಲ್ನೋಟಕ್ಕೆ ಪ್ರಕರಣವಿದೆ ಎಂದು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಉಳಿದ 2 ಅಂಶಗಳನ್ನು ಚರ್ಚಿಸುವುದು ಅವಶ್ಯವಿರುವುದಿಲ್ಲ. ಈ ಹಂತದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಉಲ್ಲೇಖಿಸಬೇಕಾಗುತ್ತದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು **Kashi Math Samsthan V. Srimad Sudhindra Thirtha Swamy** reported in **AIR 2010 SC 296**, ಎಂದು ವರದಿಯಾಗಿರುವ ತೀರ್ಪಿನಲ್ಲಿ ಈ ರೀತಿ ಅಭಿಪ್ರಾಯಪಟ್ಟಿರುತ್ತದೆ.

"It is well settled that in order to obtain an order of injunction, the party who seeks for grant of such injunction has to prove that he has made out a prima-facie case to go for trial, the

> balance of convenience is also in his favour and he will suffer irreparable loss and injury if injunction is not granted. But it is equally well settled that when a party fails to prove prima-facie case to go for trial, question of considering the balance of convenience of irreparable loss and injury to the party concerned would not be material at all, that is to say, if that party fails to prove prima-facie case to go for trail, it is not open to the Court to grant injunction in his favour even if, he had made out a case of balance of convenience being in his favour and would suffer irreparable loss and injury if so injunction order is granted."

18. ಈಗಾಗಲೇ ಚರ್ಚಿಸಿದಂತೆ ವಿವಾದಿತ ಸ್ವತ್ತು ಖಾಲಿ ನಿವೇಶನವಾಗಿದ್ದು, ಉಭಯಪಕ್ಷಗಾರರು ಸದರಿ ಸ್ವತ್ತಿಗೆ ಮಾಲೀಕತ್ವಕ್ಕಾಗಿ ಕ್ಲೇಮು ಮಾಡುತ್ತಿದ್ದು, ಉಭಯ ಪಕ್ಷಗಾರರು ತಮ್ಮ ಪರವಾಗಿ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಹೀಗಿರುವಾಗ ದಾವಾ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆಂಬುದನ್ನು ಈ ಹಂತದಲ್ಲಿ ನಿರ್ಧರಿಸಲಾಗುವುದಿಲ್ಲ ಮತ್ತು ಮೇಲೆ ಚರ್ಚಿಸಿದಂತೆ ವಾದಿಗಳು ತಮ್ಮ ಪರವಾಗಿ ಮೇಲ್ನೋಟಕ್ಕೆ ಪ್ರಕರಣವಿದೆ ಎಂದು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಈ ಹಂತದಲ್ಲಿ ಅನುಕೂಲತೆಯ ತಕ್ಕಡಿ ಮತ್ತು ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದೆ ಇದ್ದರೆ ತಮಗೆ ತುಂಬಲಾರದ ನಷ್ಟುಂಟಾಗುತ್ತದೆಂಬ ಅಂಶಗಳನ್ನು ಪರಿಗಣಿಸುವ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ಈ ಮೇಲೆ ಚರ್ಚಿಸಿದ ಎಲ್ಲಾ ಅಂಶಗಳನ್ನು ಮತ್ತು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಅನುಕೂಲತೆಯ ತಕ್ಕಡಿ ತಮ್ಮ ಪರ ಇದೆ ಮತ್ತು ಮಧ್ಯಕಾಲೀನ ಅರ್ಜಿ ಸಂಖ್ಯೆ:-1 ನ್ನು ಪುರಸ್ಕರಿಸದೆ ಇದ್ದಲ್ಲಿ ತಮಗೆ ತುಂಬಲಾರದ ನಷ್ಟವಾಗುತ್ತದೆ ಎಂದು ರುಜುವಾತುಪಡಿಸಲು ವಾದಿಗಳು ವಿಫಲರಾಗಿರುವುದರಿಂದ ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ-2

ಮತ್ತು 3 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಯಿತು.

19. **ಅಂಶಃ-4**: - ಅಂಶ 1 ರಿಂದ 3 ರ ಚರ್ಚೆಯ ಆಧಾರದ ಮೇಲೆ ಈ ಕೆಳಕಂಡಂತೆ

**ಆದೇಶ**

ವಾದಿಗಳು ಸಲ್ಲಿಸಿರುವ ಮಧ್ಯಕಾಲಿನ ಅರ್ಜಿ ಸಂಖ್ಯೆ 1 ನ್ನು ವಜಾಗೊಳಿಸಲಾಗಿದೆ ಮತ್ತು ದಿನಾಂಕ 21.02.2026 ರಂದು ನೀಡಿರುವ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಈ ಮೂಲಕ ತೆರವುಗೊಳಿಸಲಾಗಿದೆ.

ಈ ಆದೇಶದಲ್ಲಿ ಯಾವುದೂ ಉಭಯ ಪಕ್ಷಗಾರರ ನಡುವೆ ಬಾಕಿ ಉಳಿದಿರುವ ಪ್ರಕರಣದ ಅಂತಿಮ ಅರ್ಹತೆಯ ಅಭಿವ್ಯಕ್ತಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

(Before parting with this order, it is clarified that, nothing in this order shall be deemed to be an expression on the final merits of the suit pending between the parties.)

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

(ಆದೇಶವನ್ನು ಶೀಘ್ರಲಿಪಿಗಾರರ ಮೂಲಕ ಬೆರಳಚ್ಚು ಮಾಡಿಸಿದ್ದು, ನಂತರ ಅದನ್ನು ಓದಿ, ತಿದ್ದಿ ಪರಿಷ್ಕರಿಸಿ, ಈ ದಿನ ಅಂದರೆ ದಿನಾಂಕಃ 04/04/2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಸತೀಶ ಕೆ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.